

# ಹ್ಯಾಕ್ಟಿವಿಸ್ಟ್ ಅಸ್ಸಾಂಜೆ

■ ಪ್ರವೀಣ ಕುಲಕರ್ಣಿ

ಜೂಲಿಯನ್ ಅಸ್ಸಾಂಜೆ – ಜಗತ್ತಿನಲ್ಲೀಗ ಬಹು ಚರ್ಚಿತವಾಗುತ್ತಿರುವ ಹೆಸರು. ಬೆಂಬಲಿಗರ ಪಾಲಿಗೆ ಆತ ಸತ್ಯದ ಪರವಾಗಿ ಹೋರಾಡುತ್ತಿರುವ ಧೀರ ನಾಯಕ. ಅದೇ ಟೀಕಾಕಾರರ ಪಾಲಿಗೆ ಸೂಕ್ಷ್ಮವಾದ ಮಾಹಿತಿಯನ್ನೂ ಸಾರ್ವಜನಿಕರ ಮುಂದೆ ತೆರೆದಿಟ್ಟು ಹಲವರ ಜೀವಕ್ಕೆ ಎರವಾಗುತ್ತಾ, ಬಿಟ್ಟಿಯಾಗಿ ಪ್ರಚಾರ ಗಿಟ್ಟಿಸುತ್ತಿರುವ ಖಳನಾಯಕ.

ಈ ಅಸ್ಸಾಂಜೆ ಯಾರು ಗೊತ್ತೆ?

2006ರಲ್ಲಿ 'ವಿಕಿಲೀಕ್ಸ್' ಎಂಬ ವಿಲಕ್ಷಣವಾದ ವೆಬ್‌ಸೈಟ್ ಹುಟ್ಟುಹಾಕಿ ಜಗತ್ತಿನಲ್ಲಿ ಸಂಚಲನ ಮೂಡಿಸಿದ ಪತ್ರಕರ್ತ, ಪ್ರಕಾಶಕ, ಚಳವಳಿಗಾರ. ಮಾಧ್ಯಮಲೋಕ ಈತನನ್ನು 'ಹ್ಯಾಕ್ಟಿವಿಸ್ಟ್' (ಕಂಪ್ಯೂಟರ್ ಹ್ಯಾಕಿಂಗ್‌ನಲ್ಲಿ ಪರಿಣತಿ ಸಾಧಿಸಿದ ಚಳವಳಿಗಾರ) ಎಂದು ಕರೆಯುವುದುಂಟು. ಹ್ಯಾಕಿಂಗ್‌ನಲ್ಲಿ ಅಸ್ಸಾಂಜೆಯನ್ನು ಮೀರಿಸುವವರಿಲ್ಲ ಎನ್ನುವುದು ಆತನಿಗೆ ಅಂಟಿಕೊಂಡ ಖ್ಯಾತಿ. 'ವಿಕಿಲೀಕ್ಸ್' ಮೂಲಕ ರಹಸ್ಯ ದಾಖಲೆಗಳು ಹಾಗೂ ಚಿತ್ರಗಳನ್ನು ಪ್ರಕಟಿಸುತ್ತಿದ್ದ ಅಸ್ಸಾಂಜೆ, ಮೊದಲ ಸಲ ಜಗತ್ತಿನ ಗಮನಸೆಳೆದಿದ್ದು 2010ರ ಏಪ್ರಿಲ್‌ನಲ್ಲಿ. ಅಮೆರಿಕದ ಸೈನಿಕರು ಇರಾಕ್‌ನ ನಾಗರಿಕರ ಮೇಲೆ ಗುಂಡು ಹಾರಿಸಿದ ದೃಶ್ಯಾವಳಿಯನ್ನು ಆಗ 'ವಿಕಿಲೀಕ್ಸ್' ಬಿಡುಗಡೆ ಮಾಡಿತ್ತು. 'ಟೈಮ್' ಪತ್ರಿಕೆ ಆ ವರ್ಷ ಅಸ್ಸಾಂಜೆಯನ್ನೇ 'ವರ್ಷದ ವ್ಯಕ್ತಿ'ಯನ್ನಾಗಿ ಆಯ್ಕೆ ಮಾಡಿತ್ತು.

ಅಮೆರಿಕ ಸಾರಿದ ಇರಾಕ್ ಹಾಗೂ ಅಫ್ಘಾನಿಸ್ತಾನ ಯುದ್ಧಗಳ ಗುಪ್ತ ಮಾಹಿತಿಗಳು, ರಾಜತಾಂತ್ರಿಕ ವ್ಯವಹಾರಗಳ ರಹಸ್ಯ ದಾಖಲೆಗಳು, 2016ರ ಅಧ್ಯಕ್ಷೀಯ ಚುನಾವಣೆ ಸಂದರ್ಭದಲ್ಲಿ ಹಿಲರಿ ಕ್ಲಿಂಟನ್ ಹಾಗೂ ಡೆಮಾಕ್ರಟಿಕ್ ಪಕ್ಷದ ರಾಷ್ಟ್ರೀಯ ಸಮಿತಿಯ ನಡುವಿನ ಗೌಪ್ಯ ವಿವರಗಳನ್ನು ಒಳಗೊಂಡ ಇಮೇಲ್‌ಗಳು... ಹೀಗೆ 'ವಿಕಿಲೀಕ್ಸ್' ಬಯಲು ಮಾಡಿದ ರಹಸ್ಯ ಸಂಗತಿಗಳು ಹತ್ತು–ಹಲವು. 2016ರ ಅಧ್ಯಕ್ಷೀಯ ಚುನಾವಣೆಯಲ್ಲಿ ರಷ್ಯಾದ ಆಣತಿಯಂತೆ ಕೆಲಸಮಾಡಿದ ಆರೋಪವೂ 'ವಿಕಿಲೀಕ್ಸ್' ಮೇಲಿದೆ. 'ವಿಕಿಲೀಕ್ಸ್'ಗೆ ರಹಸ್ಯ ಮಾಹಿತಿಯನ್ನು ಪಡೆಯಲು ಅಂತರ್ಜಾಲದಲ್ಲಿ 'ಡೆಡ್ ಲೆಟರ್ ಬಾಕ್ಸ್' ತೆರೆದಿದ್ದ ಅಸ್ಸಾಂಜೆ, ದಾಖಲೆಗಳನ್ನು ಒದಗಿಸಿದವರ ವಿವರವನ್ನು ಗೌಪ್ಯವಾಗಿ ಇಡುತ್ತಿದ್ದ. ಹೀಗಾಗಿ ತನ್ನ ವೆಬ್‌ಸೈಟ್‌ನ ಕಾರ್ಯ ಚಟುವಟಿಕೆಗಳ ತಾಣವನ್ನು ಮೇಲಿಂದ ಮೇಲೆ ಬದಲಾಯಿಸುತ್ತಿದ್ದ.

ಆಸ್ಟ್ರೇಲಿಯಾದ ಅಸಾಮಾನ್ಯ ಬುದ್ಧಿಮತ್ತೆಯ ಈ ವ್ಯಕ್ತಿ, ಬಾಲ್ಯದಲ್ಲಿ ಒಂದೆಡೆ ನೆಲೆ ನಿಂತವನಲ್ಲ. ಆತನ ಪಾಲಕರು ರಂಗಸಂಚಾರದ ತಂಡವೊಂದನ್ನು ಕಟ್ಟಿಕೊಂಡು ಊರಿಂದೂರಿಗೆ ನೆಲೆ ಬದಲಿಸುತ್ತಿದ್ದರು. ಶಿಕ್ಷಣವನ್ನು ಪೂರ್ಣಗೊಳಿಸುವ ಹೊತ್ತಿಗೆ ಆತ 37 ಶಾಲೆಗಳನ್ನು ಬದಲಾಯಿಸಬೇಕಾಯಿತು. ಕಾಲೇಜು ದಿನಗಳಲ್ಲಿಯೇ ಹ್ಯಾಕ್ ಮಾಡಿ ಸಿಕ್ಕಿಬಿದ್ದಿದ್ದ ಆತನಿಗೆ ಸಾವಿರಾರು ಡಾಲರ್ ದಂಡವನ್ನೂ ವಿಧಿಸಲಾಗಿತ್ತು. ಮುಂದೆ ಯುರೋಪಿಗೆ ತೆರಳಿ 'ವಿಕಿಲೀಕ್ಸ್' ಹುಟ್ಟುಹಾಕಿದ.

ಅಮೆರಿಕದ ಸೈನಿಕರು ನಡೆಸಿದ ದಾಳಿಯ ದೃಶ್ಯಾವಳಿಯನ್ನು 'ವಿಕಿಲೀಕ್ಸ್' ಬಿಡುಗಡೆ ಮಾಡಿದ ಕೆಲವೇ ವಾರಗಳಲ್ಲಿ ಅಸ್ಸಾಂಜೆ ವಿರುದ್ಧ ಸ್ವೀಡನ್ನಿನಲ್ಲಿ ಲೈಂಗಿಕ ದೌರ್ಜನ್ಯದ ದೂರು ದಾಖಲಾಯಿತು. ಸ್ವೀಡನ್, ಆತನ ಬಂಧನಕ್ಕಾಗಿ ಅಂತರರಾಷ್ಟ್ರೀಯ ವಾರೆಂಟ್ ಅನ್ನೂ ಹೊರಡಿಸಿತು. ಬಂಧನದ ಭೀತಿಯಲ್ಲಿದ್ದ ಅಸ್ಸಾಂಜೆಗೆ ಲಂಡನ್ನಿನ ಇಕ್ವೆಡಾರ್‌ನ ದೂತಾವಾಸದಲ್ಲಿ ರಾಜಕೀಯ ಆಶ್ರಯ ಸಿಕ್ಕಿತು. ಏಳು ವರ್ಷಗಳವರೆಗೆ ದೂತಾವಾಸದಲ್ಲೇ ದಿನಗಳನ್ನು ದೂಡಿದ. ಆ ದಿನಗಳಲ್ಲೇ ಸ್ಟೆಲ್ಲಾ ಮೋರಿಸ್ ಎಂಬ ದಕ್ಷಿಣ ಆಫ್ರಿಕಾ ಮೂಲದ ವಕೀಲೆಯೊಂದಿಗೆ ಸಂಗವನ್ನೂ ಬೆಳೆಸಿದ. ಅಸ್ಸಾಂಜೆ–ಸ್ಟೆಲ್ಲಾ ಜೋಡಿಗೀಗ ಇಬ್ಬರು ಮಕ್ಕಳು.

'ದೂತಾವಾಸದಿಂದ ನಾನು ಹೊರಹೋಗಲಾರೆ' ಎಂದು ಪದೇ ಪದೇ ಹೇಳುತ್ತಿದ್ದ ಅಸ್ಸಾಂಜೆ, 'ಅಮೆರಿಕದ ರಹಸ್ಯ ದಾಖಲೆಗಳನ್ನು ಬಯಲು ಮಾಡಿದ್ದರಿಂದ ಸ್ವೀಡನ್‌ನ ಪ್ರಕರಣದ ನೆಪದಲ್ಲಿ ನನ್ನನ್ನು ಅಲ್ಲಿಗೆ ಕರೆದೊಯ್ದು, ಅಲ್ಲಿಂದ ಅಮೆರಿಕಕ್ಕೆ ಒಪ್ಪಿಸಲಾಗುತ್ತದೆ' ಎನ್ನುತ್ತಿದ್ದ. ಬೇಹುಗಾರಿಕೆ ಕಾಯ್ದೆಯ ಅಡಿಯಲ್ಲಿ ಅಮೆರಿಕದಲ್ಲಿ ಅಸ್ಸಾಂಜೆ ವಿರುದ್ಧ ಹಲವು ಪ್ರಕರಣಗಳು ದಾಖಲಾಗಿದ್ದು, ಆತನನ್ನು ವಶಕ್ಕೆ ಪಡೆಯಲು ಪ್ರಯತ್ನ ಮಾಡುತ್ತಲೇ ಇದೆ.

ಅಸ್ಸಾಂಜೆಗೆ ಒದಗಿಸಿದ್ದ ರಾಜಕೀಯ ಆಶ್ರಯವನ್ನು ಇಕ್ವೆಡಾರ್ ಹಿಂಪಡೆದ ಬಳಿಕ 2019ರ ಏಪ್ರಿಲ್‌ನಲ್ಲಿ ಲಂಡನ್ ಪೊಲೀಸರು ಆತನನ್ನು ಬಂಧಿಸಿದರು. ಜಾಮೀನಿನ ಷರತ್ತು ಉಲ್ಲಂಘಿಸಿದ ಕಾರಣಕ್ಕೆ ಬ್ರಿಟಿಷ್ ನ್ಯಾಯಾಲಯ ಆತನಿಗೆ 50 ವಾರಗಳ ಕಾರಾಗೃಹ ಶಿಕ್ಷೆ ವಿಧಿಸಿತು. ಲಂಡನ್ ಪೊಲೀಸರು ಅಸ್ಸಾಂಜೆಯನ್ನು ಬಂಧಿಸಿದ ಸುದ್ದಿ ತಿಳಿಯುತ್ತಿದ್ದಂತೆಯೇ ಅಸ್ಸಾಂಜೆಯನ್ನು ತನ್ನ ವಶಕ್ಕೆ ಒಪ್ಪಿಸಬೇಕೆಂಬ ಬೇಡಿಕೆಯನ್ನು ಅಮೆರಿಕವು ಲಂಡನ್ ಪೊಲೀಸರ ಮುಂದಿಟ್ಟಿತ್ತು. ಆದರೆ, ಅಲ್ಲಿನ ನ್ಯಾಯಾಲಯ ಕಳೆದ ವಾರವಷ್ಟೇ ಆ ಬೇಡಿಕೆಯನ್ನು ತಿರಸ್ಕರಿಸಿದೆ.

ಅಸ್ಸಾಂಜೆ ಪರ ವಕೀಲರು ಹೇಳುವ ಪ್ರಕಾರ, ಆತನ ಮಾನಸಿಕ ಸ್ಥಿತಿ ಈಗ ತುಂಬಾ ನಾಜೂಕಾಗಿದೆ. ಕಾಲ್ಪನಿಕವಾದ ಸಂಗೀತ ಹಾಗೂ ಧ್ವನಿ ಆತನ ಕಿವಿಯಲ್ಲಿ ಸದಾ ಗುಂಯ್‌ಗುಡುತ್ತಿರುವಂತೆ ಆತನಿಗೆ ಭಾಸವಾಗುವುದಂತೆ. ಅಮೆರಿಕಕ್ಕೆ ಒಪ್ಪಿಸಿದರೆ ಆತ ಆತ್ಮಹತ್ಯೆ ಮಾಡಿಕೊಳ್ಳುವ ಸಾಧ್ಯತೆ ಹೆಚ್ಚು ಎನ್ನುವ ವೈದ್ಯಕೀಯ ವಿಶ್ಲೇಷಣೆಯೇ ಆತನನ್ನು ಸದ್ಯ ಲಂಡನ್ನಿನಲ್ಲಿ ಉಳಿಯುವಂತೆ ಮಾಡಿದೆ. ■